Affairs at the Bangalore City Corporation

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ಪೇಟೆ).—ನಾನು ತಮಗೆ ಒಂದು ನೋಟೀಸನ್ನು ಕಳುಹಿಸಿದ್ದೆ. ಅದು ಈ ಸಭೆಯ ಹಕ್ಕಿಗೆ ಧಕ್ಕೆ ತರತಕ್ಕಂಥಾ ಹಾಗೂ ಬಹಳ ಪ್ರಮುಖವಾದ ವಿಷಯ. ನಿನ್ನೆಯ ದಿವಸ ಕಾರ್ಪೊರೇಷನ್ ಸಭೆಯಲ್ಲಿ ಮೇಯರ್ ಅವರು ಒಂದು ಗುರುತರ ವಾದ ಆಪಾದನೆಯನ್ನು ಮಾಡಿದ್ದಾರೆ. ಬೆಂಗಳೂರು ನಗರದ ಮೇಯರ್ ಅವರು ಈ ಸಭೆಯಲ್ಲಿ ನಡೆದಂತಹ ಚರ್ಚೆಯನ್ನು ತರಿಸಿಕೊಂಡು ನಮ್ಮ ವಿಷಯದಲ್ಲಿ ಚರ್ಚೆ ಮಾಡಬೇಕು, ಅದಕ್ಕೆ ಈ ಸಭೆಯ ರೆಕಾರ್ಡ್‌ನ್ನು ಕಾಲ್‌ಫಾರ್ ಮಾಡುತ್ತೇನೆ ಎಂದು ಹೇಳಿದ್ದಾರೆ. ಇದು ಪತ್ರಿಕೆಯಲ್ಲಿ ಕೂಡ ಬಂದಿದೆ.

Mr. DEPUTY SPEAKER.—It has been received just now, only two minutes back.

ಶ್ರೀ ವಾಟಾಳ್ ನಾಗರಾಜ್.—ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಯಾವಾಗ ಬೇಕಾದರೂ ಕೊಡಿ. ಅಷ್ಟರೊಳಗೆ ನಿನ್ನೆಯ ದಿವಸ ಬೆಂಗಳೂರು ಕಾರ್ಪೊರೇಷನ್ ಸಭೆಯಲ್ಲಿ ನಡೆದಂತಹ ಪ್ರೊಸೀಡಿಂಗ್ಸ್ ಅನ್ನೂ, ಟೇಪ್ ರೆಕಾರ್ಡನ್ನೂ ಬೇಗ ಅಲ್ಲಿಂದ ತರಿಸಿ. ಅವರು ಅದರಲ್ಲಿ ಏನು ಬದಲಾವಣೆಯನ್ನು ಬೇಕಾದರೂ ಮಾಡುತ್ತಾರೆ. ಇಂಥಾ ಅನೇಕ ಸಂದರ್ಭಗಳಲ್ಲಿ ಪ್ರೊಸೀಡಿಂಗ್ಸ್ ಅನ್ನೂ ಟೇಪ್ ರೆಕಾರ್ಡನ್ನೂ ಟ್ಯಾಂಪರ್ ಮಾಡಿರುವುದನ್ನು ನಾನು ನೋಡಿದ್ದೇನೆ. ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೂ ಹಾಗೂ ಮಾನ್ಯ ಅಧ್ಯಕ್ಷರ ಗಮನಕ್ಕೂ ಈ ವಿಷಯವನ್ನು ತರುತ್ತಿದ್ದೇನೆ. ತಾವು ದಯವಿಟ್ಟು ನಿನ್ನೆಯ ದಿವಸ ಬೆಂಗಳೂರು ಕಾರ್ಪೊರೇಷನ್ ಸಭೆಯಲ್ಲಿ ನಡೆದಂತಹ ಕಾರ್ಯಕಲಾಪಗಳ ಪ್ರೊಸೀಡಿಂಗ್ಸ್ ಮತ್ತು ಟೇಪ್ ರೆಕಾರ್ಡನ್ನು ಜಾಗ್ರತೆಯಾಗಿ ಇಲ್ಲಿಗೆ ತರಿಸಿ ನೋಡಬೇಕು. ಆದ್ದರಿಂದ ಈಗ ತಾವು ಕೂಡಲೇ ಕಮಿಷನರಿಗೆ ಹೇಳಿ. ಅಲ್ಲಿ ಬಹಳ ದೊಡ್ಡ ದೊಡ್ಡ ರಾಜಕೀಯ ರಂಗಗಳು ನಡೆಯುತ್ತವೆ. ರಾತ್ರಿ 8 ಗಂಟೆಯ ವೇಳೆಯಲ್ಲಿ ಯಾರೂ ಇಲ್ಲದೇ ಇರುವಾಗ ಕಂಪ್ಲೀಟ್ ರೆಕಾರ್ಡನ್ನೇ ಬದಲಾವಣೆ ಮಾಡುತ್ತಾರೆ. ಆದ್ದರಿಂದ ಅದನ್ನು ಬೇಗ ತರಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಬೆಂಗಳೂರು ಕಾರ್ಪೊರೇಷನ್‌ನಲ್ಲಿರತಕ್ಕ ಮೇಯರ್ ಅವರು ಬೆಂಗಳೂರಿನ ದೊರೆ ಎಂದು ತಿಳಿದುಕೊಂಡಿದ್ದಾರೆ. ಆದ್ದರಿಂದ ತಾವು ದಯವಿಟ್ಟು ಆರ್ಡರ್ ಮಾಡಿ ಆ ರೆಕಾರ್ಡನ್ನು ತರಿಸಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. DEPUTY SPEAKER.—I assure the Hon. member that it will be considered in the best possible manner.

Sri C. M. ARUMUGAM (K.G.F.) —The House enjoys certain immunities under the Constitution and the Mayor of Bangalore City Corporation cannot question the proceedings of this House. The fourth-rate Municipal Mayor cannot question the proceedings.

Mr. DEPUTY SPEAKER.—It is wrong on the part of the Hon'ble Member to impute motives against a person who is not present in the House to defend himself. It is not fair on the part of a senior member like Sri Arumugam to impute motive against the Mayor of the Corporation.

Sri C. M. ARUMUGAM.—In a tussel between the two groups of the Congress (R), one group headed by the Mayor and another group headed by another person, the Municipal Mayor shall not question the proceedings of this House. After all the Mayor is governed by the Municipal Act and he is subordinate to the Government.

Sri D. DEVARAJ URS (Chief Minister).—Certain allegations have been made against the Mayor saying that the Mayor has questioned as to

(SRI D. DEVARAJ URS)

what happened in the Assembly. Hon. Member Sri Vatal Nagaraj has said that the Records of the Corporation may be immediately got by the Hon. Speaker and examined. I think the Hon. Speaker has promised that the records would be secured. When the records are placed on the Table of the House, the Hon. Members have a right to say what they want, but in the meanwhile, let us not give an impression that there is a war or a fight between the two groups of the Congress (R). You can say that some vested interests are creating trouble, but please do not say that some groups or individuals are creating trouble. You may put it in that way.

Sri C. M. ARUMUGAM.—But for the Congress (R) some of the persons would not have seen the place of Mayoralty. The Mayor, however big he might be, should not comment upon the proceedings of this House. We must not tolerate such a grave situation. It is the privilege of this House to call the Mayor to order. Even the Supreme Court or the High Court judges can be called to order.

Mr. DEPUTY SPEAKER.—Strictly speaking, the present discussion will not come within the scope of the rules of this House. Please avoid making references to outside persons. I may assure the Hon. Members that we will consider the matter in an appropriate manner and that too as early as possible.

Sri H. D. DEVE GOWDA (Holenarsipur).—Our only apprehension is that the records of the Corporation could be tampered with. I request the Government through you, Sir, to kindly see that the records are preserved.

Mr. DEPUTY SPEAKER.—I have already informed the members that everything possible will be done in the matter. I think the Hon. Members must be satisfied with that answer.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೆ, ಈ ಕಾರ್ಪರೇಷನ್ ವಿಷಯ ಬಂದಾಗ ಸ್ವಲ್ಪ ಮಾತನಾಡಬೇಕಂದಿದ್ದೇನೆ. ನಾನು ಕಾರ್ಪರೇಷನಿನಲ್ಲಿ 16 ವರ್ಷ ಸದಸ್ಯನಾಗಿದ್ದೆ. ಒಂದು ವರ್ಷ ಮೇಯರ್ ಆಗಿದ್ದೆ. ಆದ್ದರಿಂದ ಕಾರ್ಪರೇಷನ್‌ನಲ್ಲಿ ಯಾವ ಮಟ್ಟದಲ್ಲಿ ಚರ್ಚೆ ನಡೆಯಬೇಕೋ ಆ ಮಟ್ಟದಲ್ಲಿ ಚರ್ಚೆ ನಡೆಯುತ್ತಾ ಇಲ್ಲ. ಇಂದು ಪತ್ರಿಕೆಗಳಲ್ಲಿ ಬಂದ ವರದಿಗಳನ್ನು ನೋಡಿದ ಮೇಲೆ ಅಲ್ಲಿ ಏನು ನಡೆಯುತ್ತದೆ, ಸದಸ್ಯರು ಯಾವ ರೀತಿಯಲ್ಲಿ ವರ್ತನೆ ಮಾಡಿದ್ದಾರೆಂಬುದು ಗೊತ್ತಾಯಿತು. ಇದರಲ್ಲಿ ಮಾನ್ಯ ವಾಟಾಳ್ ನಾಗರಾಜರವರು ಹೇಳಿದ ಹಾಗೆ ತಕ್ಷಣ ಅನುಮತಿ ಕೊಟ್ಟು ಅಲ್ಲಿಯ ನಡವಳಿಕೆಗಳ ಟೇಪ್ ರಿಕಾರ್ಡ್ ಮತ್ತು ಪ್ರೊಸೀಡಿಂಗ್ಸ್ ತರಿಸಿಕೊಳ್ಳಬೇಕಾಗಿದೆ. ಅದನ್ನು ಆದಷ್ಟು ಬೇಗ ತರಿಸಿಕೊಳ್ಳದೆ ಹೋದರೆ ನೀವು ಎಷ್ಟು ಕಾಲ ಕೊಡುತ್ತಿರೋ, ಆಷ್ಟು ಕಾಲದಲ್ಲಿ ವ್ಯತ್ಯಾಸ ಮಾಡುತ್ತಾರೆ. ಆದ್ದರಿಂದ ತಮ್ಮ ಮೂಲಕ ಮುಖ್ಯ ಮಂತ್ರಿಯವರಿಗೆ ಅರಿಕೆ ಮಾಡಿಕೊಳ್ಳುವುದೇನೆಂದರೆ, ಆ ರೀಕಾರ್ಡುಗಳನ್ನು ಆಷ್ಟು ಜಾಗ್ರತೆ ತರಿಸಿಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. DEPUTY SPEAKER.—I have fully understood the Hon. Member. Let us now go to the next item on the agenda.